# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** 2016-17 ನೇ ಸಾಲಿಗೆ ಗಾಂಧಿ ಗ್ರಾಮ ಪುರಸ್ಕಾರ ಪಡೆದ ಗ್ರಾಮ ಪಂಚಾಯತಿಗಳಿಗೆ ಪ್ರೋತ್ಸಾಹ ಧನ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:**
1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 624 ಗ್ರಾಪಂಅ 2017, ಬೆಂಗಳೂರು, ದಿನಾಂಕ 19.07.2017
2) ಸಮಸಂಖ್ಯೆಯ ಸರ್ಕಾರದ ಸುತ್ತೋಲೆ, ದಿನಾಂಕ 05.01.2018
3) ಸಮಸಂಖ್ಯೆಯ ಸರ್ಕಾರದ ಆದೇಶ, ದಿನಾಂಕ 05.01.2018

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿನ ಸರ್ಕಾರದ ಆದೇಶದಲ್ಲಿ 2016-17 ನೇ ಸಾಲಿನ ಗ್ರಾಮ ಪಂಚಾಯತಿಗಳ ಪ್ರಗತಿಯನ್ನಾಧರಿಸಿ, 2016-17 ನೇ ಸಾಲಿಗೆ "ಗಾಂಧಿ ಗ್ರಾಮ ಪುರಸ್ಕಾರ" ಕ್ಕಾಗಿ ಗ್ರಾಮ ಪಂಚಾಯತಿಗಳನ್ನು ಆಯ್ಕೆ ಮಾಡಲು ಎನ್.ಐ.ಸಿ ಮೂಲಕ ಸಿದ್ಧಪಡಿಸಲಾದ ತಂತ್ರಾಂಶದಿಂದ ಪಂಚತಂತ್ರ ತಂತ್ರಾಂಶದ ಮೂಲಕ ಮಾನದಂಡಗಳನ್ನು ನಿಗಧಿಪಡಿಸಿ, ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಈ ತಂತ್ರಾಂಶದ ಮುಖಾಂತರ ಅನುಬಂಧದಡಿ ನಿಗಧಿಪಡಿಸಲಾದ ಪ್ರಶ್ನೆಗಳಿಗೆ ಉತ್ತರಿಸಿ, ಪ್ರತಿ ತಾಲ್ಲೂಕಿಗೆ ಅತಿ ಹೆಚ್ಚು ಅಂಕ ಗಳಿಸುವ ಮೂಲಕ ಅರ್ಹತೆ ಪಡೆದ ಮೂರು ಗ್ರಾಮ ಪಂಚಾಯತಿಗಳ ಸ್ಥಳ ಹಾಗೂ ದಾಖಲಾತಿ ಪರಿಶೀಲನೆ ಮಾಡಿ, ಆಯಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧ್ಯಕ್ಷತೆಯಲ್ಲಿನ ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯ ಮೂಲಕ ತಾಲ್ಲೂಕಿಗೆ ಒಂದರಂತೆ ಗ್ರಾಮ ಪಂಚಾಯತಿಗಳನ್ನು ಆಯ್ಕೆ ಮಾಡಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ತದ ನಂತರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು(ಪ.ರಾಜ್) ರವರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಪರಾಮರ್ಶೆ ಸಮಿತಿಯ ಮೂಲಕ ಅಂತಿಮಗೊಳಿಸಲಾಗುವ ತಾಲ್ಲೂಕಿಗೆ ಒಂದರಂತೆ ಒಟ್ಟು 176 ಗ್ರಾಮ ಪಂಚಾಯತಿಗಳಿಗೆ 'ಗಾಂಧಿ ಗ್ರಾಮ ಪುರಸ್ಕಾರ' ನೀಡಿ ಅಕ್ಟೋಬರ್ 2 ರ ಗಾಂಧಿ ಜಯಂತಿ ದಿನದಂದು ಗೌರವಿಸಲಾಗುತ್ತದೆ.

ಗಾಂಧಿ ಗ್ರಾಮ ಪುರಸ್ಕಾರ ಯೋಜನೆಯ ಅಂಗವಾಗಿ ಈ ಗ್ರಾಮ ಪಂಚಾಯತಿಗಳಿಗೆ ತಲಾ ರೂ. 5.00 ಲಕ್ಷಗಳ ಪ್ರೋತ್ಸಾಹ ಅನುದಾನ ನೀಡಿ ಪುರಸ್ಕರಿಸಲಾಗುತ್ತದೆ. ಅದರಂತೆ 2016-17 ನೇ ಸಾಲಿಗೆ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಆಯ್ಕೆಯಾದ ತಾಲ್ಲೂಕಿಗೆ ಒಂದರಂತೆ ಒಟ್ಟು 176 ಗ್ರಾಮ ಪಂಚಾಯತಿಗಳಿಗೆ ಈ ಪ್ರೋತ್ಸಾಹ ಧನ ಬಿಡುಗಡೆಗೊಳಿಸಬೇಕಾಗಿರುತ್ತದೆ.

ಮೇಲೆ ಓದಲಾದ (3) ರಲ್ಲಿನ ಸರ್ಕಾರದ ಆದೇಶದಲ್ಲಿ, ಸದರಿ ಪುರಸ್ಕೃತ ಗ್ರಾಮ ಪಂಚಾಯತಿಗಳು ಬಯಲು ಬಹಿರ್ದೆಸೆ ಮುಕ್ತವೆಂದು ಘೋಷಣೆ ಮಾಡಿಕೊಂಡು ಇತರೆ ಗ್ರಾಮ ಪಂಚಾಯತಿಗಳಿಗೆ ಮಾದರಿಯಾಗಬೇಕಾಗಿರುವುದರಿಂದ ಪ್ರಥಮ ಹಂತದಲ್ಲಿ 2016-17 ಗಾಂಧಿ ಗ್ರಾಮ ಪುರಸ್ಕಾರಕ್ಕೆ ಆಯ್ಕೆಯಾದ ಗ್ರಾಮ ಪಂಚಾಯತಿಗಳಲ್ಲಿ ಬಯಲು ಬಹಿರ್ದೆಸೆ ಮುಕ್ತವೆಂದು ಘೋಷಣೆ ಮಾಡಿಕೊಂಡ 118 ಗ್ರಾಮ ಪಂಚಾಯತಿಗಳಿಗೆ ಮಾತ್ರ ಪ್ರೋತ್ಸಾಹ ಧನ ತಲಾ ರೂ.5.00 ಲಕ್ಷಗಳಂತೆ ಒಟ್ಟು ರೂ.5.90 ಕೋಟಿಗಳನ್ನು 2017-18 ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ: 2515-00-102-0-11-11 (ಯೋಜನೇತರ) ರಡಿ ವೆಚ್ಚ ಭರಿಸಿ ಬಿಡುಗಡೆ ಮಾಡಲಾಗಿದೆ.

2016-17 ಗಾಂಧಿ ಗ್ರಾಮ ಪುರಸ್ಕಾರಕ್ಕೆ ಆಯ್ಕೆಯಾದ ಗ್ರಾಮ ಪಂಚಾಯತಿಗಳಲ್ಲಿ ಇನ್ನುಳಿದ 58 ಗ್ರಾಮ ಪಂಚಾಯತಿಗಳು ಬಯಲು ಬಹಿರ್ದೆಸೆ ಮುಕ್ತವೆಂದು ಘೋಷಣೆ ಮಾಡಿಕೊಂಡ ನಂತರ ಈ ಪ್ರೋತ್ಸಾಹ ಧನವನ್ನು ಬಳಸಿಕೊಳ್ಳುವ ಷರತ್ತಿಗೊಳಪಟ್ಟು ಬಿಡುಗಡೆ ಮಾಡಲು ಸರ್ಕಾರವು ನಿರ್ಣಯಿಸಿದೆ.

ಅದರಂತೆ, ಸದರಿ 58 ಪುರಸ್ಕೃತ ಗ್ರಾಮ ಪಂಚಾಯತಿಗಳಿಗೆ ತಲಾ ರೂ.5.00 ಲಕ್ಷಗಳಂತೆ ಒಟ್ಟು ರೂ.2.90 ಕೋಟಿಗಳನುರೀ ಉದ್ದೇಶಕ್ಕಾಗಿ ಒದಗಿಸಲಾಗಿರುವ 2017-18 ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ: 2515-00-102-0-11-11 (ಯೋಜನೇತರ) ನಿಂದ ಸೆಳೆದು, ಸದರಿ ಪುರಸ್ಕೃತ 58 ಗ್ರಾಮ ಪಂಚಾಯತಿಗಳ 14 ನೇ ಹಣಕಾಸು ಆಯೋಗದ ಬ್ಯಾಂಕ್ ಖಾತೆಗಳಿಗೆ ತಲಾ ರೂ.5.00 ಲಕ್ಷಗಳ ಪ್ರೋತ್ಸಾಹ ಧನವನ್ನು ಆರ್.ಟಿ.ಜಿ.ಎಸ್. ಮೂಲಕ ನೇರವಾಗಿ ಬಿಡುಗಡೆ ಮಾಡಲು ಸರ್ಕಾರವು ನಿರ್ಧರಿಸಿದೆ. ಅದರನ್ವಯ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 932 ಗ್ರಾಪಂಅ 2017 ಬೆಂಗಳೂರು, ದಿನಾಂಕ 15.02.2018**

ಮೇಲಿನ ಎಲ್ಲಾ ಪ್ರಸ್ತಾವನೆಗಳನ್ನು ಗಣನೆಗೆ ತೆಗೆದುಕೊಂಡು, 2016–17 ನೇ ಸಾಲಿನ 'ಗಾಂಧಿ ಗ್ರಾಮ ಪುರಸ್ಕಾರ'ಕ್ಕೆ ಆಯ್ಕೆಯಾಗಿರುವ 176 ಗ್ರಾಮ ಪಂಚಾಯತಿಗಳಲ್ಲಿ, ಇನ್ನುಳಿದ 58 ಪುರಸ್ಕೃತ ಗ್ರಾಮ ಪಂಚಾಯತಿಗಳಿಗೆ ತಲಾ ರೂ.5.00 ಲಕ್ಷಗಳ (ಐದು ಲಕ್ಷ ರೂಪಾಯಿಗಳು ಮಾತ್ರ) ಪ್ರೋತ್ಸಾಹ ಧನವನ್ನು ಈ ಉದ್ದೇಶಕ್ಕಾಗಿ 2017–18 ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ: 2515-00-102-0-11-117 (ಯೋಜನೇತರ) ರಡಿ ಒದಗಿಸಲಾದ ಅನುದಾನದಡಿ ವೆಚ್ಚ ಭರಿಸಿ, ರೂ.2.90 ಕೋಟಿಗಳ (ಎರಡು ಕೋಟಿ ತೊಂಬತ್ತು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ಸರ್ಕಾರದ ಅಧೀನ ಕಾರ್ಯದರ್ಶಿ(ಜಿಲ್ಲಾ ಪಂಚಾಯತ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರು ರಾಜ್ಯ ಹುಜೂರ್ ಖಜಾನೆಯಿಂದ ಸಾದಿಲ್ವಾರು ಬಿಲ್ ಮೇಲೆ ಡ್ರಾ ಮಾಡಲು ಮತ್ತು ಈ ಪ್ರೋತ್ಸಾಹ ಧನವನ್ನು ಅನುಬಂಧದಲ್ಲಿ ಲಗತ್ತಿಸಿರುವ 58 ಗ್ರಾಮ ಪಂಚಾಯತಿಗಳ 14 ನೇ ಹಣಕಾಸು ಆಯೋಗದ ಬ್ಯಾಂಕ್ ಉಳಿತಾಯ ಖಾತೆಗೆ ತಲಾ ರೂ.5.00 ಲಕ್ಷಗಳಂತೆ ಆರ್.ಟಿ.ಜಿ.ಎಸ್ ಮೂಲಕ ಕೆಳಕಂಡ ಷರತ್ತುಗಳಿಗೊಳಪಟ್ಟು ಬಿಡುಗಡೆಗೊಳಿಸಿ ಆದೇಶಿಸಿದೆ.

1) ಆಯಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಅನುಬಂಧದಲ್ಲಿ ವಿವರಿಸಿರುವ ಪುರಸ್ಕೃತ ಗ್ರಾಮ ಪಂಚಾಯತಿಗಳು ಬಯಲು ಬಹಿರ್ದೆಸೆ ಮುಕ್ತವೆಂದು ಘೋಷಣೆ ಮಾಡಿಕೊಂಡ ನಂತರ, ಈ ಪ್ರೋತ್ಸಾಹ ಧನವನ್ನು ಬಳಕೆ ಮಾಡಿಕೊಳ್ಳಲು ಸದರಿ ಪುರಸ್ಕೃತ ಗ್ರಾಮ ಪಂಚಾಯತಿಗಳಿಗೆ ಅನುಮತಿ ನೀಡಲು ತಿಳಿಸಿದೆ ಹಾಗೂ ಬಯಲು ಬಹಿರ್ದೆಸೆ ಮುಕ್ತವೆಂದು ಘೋಷಣೆ ಮಾಡಿಕೊಂಡ ನಂತರವೇ ಮೇಲೆ ಓದಲಾದ (2) ರಲ್ಲಿನ ಸರ್ಕಾರದ ಸುತ್ತೋಲೆಯಲ್ಲಿನ ಮಾರ್ಗಸೂಚಿಗಳನ್ವಯ ಸಿದ್ಧಪಡಿಸಲಾದ ಕ್ರಿಯಾಯೋಜನೆಗೆ ಅನುಮೋದನೆ ನೀಡಲು ತಿಳಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 516 ವೆಚ್ಚ–6/2017 ದಿನಾಂಕ: 09.10.2017ರ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

15/2

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ:**

1) ಮಹಾಲೇಖಪಾಲರು, ಕರ್ನಾಟಕ ವೃತ್ತ, ಬೆಂಗಳೂರು.
2) ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
3) ಉಪನಿರ್ದೇಶಕರು, ರಾಜ್ಯ ಖಜಾನೆ ಗಣಕ ಕೋಶ, ಖನಿಜ ಭವನ, ಬೆಂಗಳೂರು.
4) ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ–6, ವಿಧಾನಸೌಧ, ಬೆಂಗಳೂರು.
5) ನಿರ್ದೇಶಕರು(ಪಂ.ರಾಜ್– 1 ಮತ್ತು 2), ಗ್ರಾ.ಅ.& ಪಂ.ರಾಜ್ ಇಲಾಖೆ, ಬೆಂಗಳೂರು.
6) ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು.
7) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳು.
8) ಕಾರ್ಯನಿರ್ವಾಹಕ ಅಧಿಕಾರಿಗಳು, ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳು.
9) ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳು (ಆಯಾ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಯ ಮುಖಾಂತರ).
10) ಕರ್ನಾಟಕ ವಿಕಾಸ ಮಾಸಪತ್ರಿಕೆಯಲ್ಲಿ ಪ್ರಕಟಿಸಲು.
11) ಗಣಕ ಕೋಶ – ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು.
12) ಶಾಖಾ ರಕ್ಷಾಕಡತಕ್ಕೆ / ಹೆಚ್ಚುವರಿ ಪ್ರತಿ

**ಪ್ರತಿಯನ್ನು ಮಾಹಿತಿಗಾಗಿ :**

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾ.ಅ. & ಪಂ.ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು.

ಅನುಬಂಧ

**2016-17 ನೇ ಸಾಲಿಗೆ ಗಾಂಧಿ ಗ್ರಾಮ ಪುರಸ್ಕಾರ ಪುರಸ್ಕೃತ ಗ್ರಾಮ ಪಂಚಾಯತಿಗಳು (ಬಯಲು ಬಹಿರ್ದೆಸೆ ಮುಕ್ತವೆಂದು ಘೋಷಣೆಯಾಗದ)**

| ಕ್ರ. ಸಂ. | ಜಿಲ್ಲೆ | ತಾಲ್ಲೂಕು | ಗ್ರಾಮ ಪಂಚಾಯತಿ |
|---|---|---|---|
| 1 | ಬಾಗಲಕೋಟೆ | ಬಾದಾಮಿ | ಕೋಟೆಕಲ್ಲ |
| 2 | | ಬಾಗಲಕೋಟೆ | ಸುತಗುಂಡಾರ |
| 3 | | ಜಮಖಂಡಿ | ಹುಲ್ಯಾಳ |
| 4 | | ಮುಧೋಳ | ಕುಳಲಿ |
| 5 | ಬೆಳಗಾವಿ | ಬೈಲಹೊಂಗಲ | ಅನಿಗೋಳ |
| 6 | | ಚಿಕ್ಕೋಡಿ | ಶಮನೇವಾಡಿ |
| 7 | | ಗೋಕಾಕ | ಯಾದವಾಡ |
| 8 | | ಹುಕ್ಕೇರಿ | ಹತ್ತರಗಿ |
| 9 | | ರಾಯಭಾಗ | ಕೋಳಿಗುಡ್ಡ |
| 10 | | ರಾಮದುರ್ಗ | ಕಿತ್ತೂರ |
| 11 | | ಸವದತ್ತಿ | ಉಗರಗೋಳ |
| 12 | ಬಳ್ಳಾರಿ | ಬಳ್ಳಾರಿ | ಸೋಮಸಮುದ್ರ |
| 13 | | ಹಡಗಲಿ | ಹ್ಯಾರಡ |
| 14 | | ಹಗರಿಬೊಮ್ಮನಹಳ್ಳಿ | ಬ್ಯಾಸಿಗದೇರಿ |
| 15 | | ಕೂಡ್ಲಿಗಿ | ಶಿವಪುರ |
| 16 | ಬೀದರ | ಔರಾದ | ಚಿಂತಾಕಿ |
| 17 | | ಬಸವಕಲ್ಯಾಣ | ಕಲಖೋರಾ |
| 18 | | ಭಾಲ್ಕಿ | ಡೋಣಗಾಪೂರ |
| 19 | | ಬೀದರ | ಔರಾದ (ಎಸ್) |
| 20 | | ಹುಮನಾಬಾದ | ದುಬಲಗುಂಡಿ |
| 21 | ವಿಜಯಪುರ | ಬಸವನ ಬಾಗೇವಾಡಿ | ಬೇನಾಳ ಆರ್.ಸಿ. |
| 22 | | ವಿಜಯಪುರ | ತೊರವಿ |
| 23 | | ಇಂಡಿ | ಬೆನಕನಹಳ್ಳಿ |
| 24 | | ಮುದ್ದೇಬಿಹಾಳ | ಇಂಗಳಗೇರಿ |
| 25 | | ಸಿಂಧಗಿ | ಮುಳಸಾವಳಗಿ |
| 26 | ಚಿತ್ರದುರ್ಗ | ಚಳ್ಳಕೆರೆ | ಮಲ್ಲೂರಹಳ್ಳಿ |
| 27 | | ಚಿತ್ರದುರ್ಗ | ಇಸ್ಸಾಮುದ್ರ |
| 28 | | ಹಿರಿಯೂರು | ಧರ್ಮಪುರ |
| 29 | | ಹೊಳಲ್ಕೆರೆ | ಟಿ.ನುಲೇನೂರು |
| 30 | | ಹೊಸದುರ್ಗ | ಬೆಲಗೂರು |
| 31 | | ಮೊಳಕಾಲ್ಮೂರು | ನೇರ್ಲಹಳ್ಳಿ |

15/2/18

| | | | |
|---|---|---|---|
| 32 | ಕಲಬುರಗಿ | ಅಫ್ಜಲ್‌ಪುರ | ಮಾಶಾಳ |
| 33 | | ಚಿಂಚೋಳಿ | ಚಿಮ್ಮನಚೋಡ |
| 34 | | ಚಿತ್ತಾಪುರ | ಕಾಳಗಿ |
| 35 | | ಕಲಬುರಗಿ | ತಾಜಸುಲ್ತಾನಪೂರ |
| 36 | | ಜೇವರ್ಗಿ | ಮಂದೇವಾಲ |
| 37 | | ಸೇಡಂ | ಮುಧೋಳ |
| 38 | ಯಾದಗಿರಿ | ಶಹಾಪುರ | ವನದುರ್ಗಾ |
| 39 | | ಸುರಪುರ | ನಾರಾಯಣಪೂರ |
| 40 | | ಯಾದಗಿರಿ | ಮಾಧವಾರ |
| 41 | ಕೊಪ್ಪಳ | ಗಂಗಾವತಿ | ಗುಂಡೂರ |
| 42 | | ಕೊಪ್ಪಳ | ಕಿನ್ನಾಳ |
| 43 | | ಕುಷ್ಟಗಿ | ಹನುಮನಾಳ |
| 44 | | ಯಲಬುರ್ಗಾ | ಸಂಗನಾಳ |
| 45 | ಮೈಸೂರು | ಹೆಗ್ಗಡದೇವನಕೋಟೆ | ಬಿ.ಮಟಕೇರೆ |
| 46 | | ಮೈಸೂರು | ಸಿಂಧುವಳ್ಳಿ |
| 47 | ರಾಯಚೂರು | ದೇವದುರ್ಗ | ಕೆ.ಇರಬಗೇರಾ |
| 48 | | ಲಿಂಗಸುಗೂರು | ಪೈದೊಡ್ಡಿ |
| 49 | | ರಾಯಚೂರು | ಮಮದಾಪೂರು |
| 50 | | ಸಿಂಧನೂರು | ಆರ್.ಹೆಚ್.ಕ್ಯಾಂಪ್ |
| 51 | ತುಮಕೂರು | ಚಿಕ್ಕನಾಯಕನಹಳ್ಳಿ | ದೊಡ್ಡಬಿದರೆ |
| 52 | | ಗುಬ್ಬಿ | ಅಡಗೂರು |
| 53 | | ಕೊರಟಗೆರೆ | ಕೋಳಾಲ |
| 54 | | ಕುಣಿಗಲ್ | ಯಲಿಯೂರು |
| 55 | | ಮಧುಗಿರಿ | ಕಲಿದೇವಪುರ |
| 56 | | ಪಾವಗಡ | ರಂಗಸಮುದ್ರ |
| 57 | | ಶಿರಾ | ಬಂದಕುಂಟೆ |
| 58 | | ತಿಪಟೂರು | ಬಿಳಿಗೆರೆ |

15/-/10